ಐದು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ, ಊರುಬಗೆ ಗ್ರಾಮದ ಸರ್ವೆ ನಂಬರು 193ರ ವಾಯವ್ಯ ಮೂಲೆಯನ್ನು ಸೇರುವ ವರೆಗೂ ಸರ್ವೆ ನಂಬರು 185ರ ಒಳಗೆ ಮೂರು ಫರಲಾಂಗಿನಷ್ಟು ದೂರ ನೈರುತ್ಯ ಮುಖನಾಗಿಯೂ, ಅನಂತರ ಸರ್ವೆ ನಂಬರು 360ರ ಪಶ್ಚಿಮ ಮೂಲೆಯನ್ನು ಸೇರುವ ವರೆಗೆ ಸರ್ವೆ ನಂಬರು 193ರ ಪಶ್ಚಿಮ ಸರಹದ್ದಿನವೇಲೆ ಆಗ್ನೇಯ ಮುಖನಾಗಿಯೂ, ಅನಂತರ ಸರ್ವೆ ನಂಬರು 330ರ ವಾಯವ್ಯ ಮೂಲೆಯನ್ನು ಸೇರುವ ವರೆಗೆ ಸರ್ವೆ ನಂಬರು 191ರ ಒಳಗೆ ನೈರುತ್ಯ ಮುಖನಾಗಿಯೂ, ಅನಂತರ ಸರ್ವೆ ನಂಬರು 330ರ ಪಶ್ಚಿಮ ಸರಹದ್ದಿನವೇಲೆ ಆಗ್ನೇಯ ಮುಖನಾಗಿಯೂ, ಅನಂತರ ಸರ್ವೆ ನಂಬರು 228ರ ನೈರುತ್ಯ ಮೂಲೆಯನ್ನು ಮುಟ್ಟುವ ವರೆಗೂ ಅದೇ ನಂಬರು ಪಶ್ಚಿಮ ಸರಹದ್ದಿನವೇಲೆ ದಕ್ಷಿಣ ಮುಖನಾಗಿಯೂ, ಅನಂತರ ಸರ್ವೆ ನಂಬರು 228 ಮತ್ತು 227ರ ದಕ್ಷಿಣ ಸರಹದ್ದುಗಳವೇಲೆ ನಾಲ್ಕು ಫರಲಾಂಗಿನಷ್ಟು ದೂರ ಪೂರ್ವ ಮುಖನಾಗಿಯೂ, ಅನಂತರ ಬೈರಾಪುರ ಗ್ರಾಮದ ಸರ್ವೆ ನಂಬರು 99ರ ವಾಯವ್ಯ ಮೂಲೆಯನ್ನು ಮುಟ್ಟುವ ವರೆಗೂ ಅದೇ ಗ್ರಾಮದ ಸರ್ವೆ ನಂಬರು 41ರ ಒಳಗೆ ನೈರುತ್ಯ ಮುಖನಾಗಿಯೂ, ಅನಂತರ ಸರ್ವೆ ನಂಬರು 99 ಮತ್ತು 160ರ ಪಶ್ಚಿಮ ಸರಹದ್ದಿನವೇಲೆ ದಕ್ಷಿಣ ಮುಖನಾಗಿಯೂ, ಅನಂತರ ಸರ್ವೆ ನಂಬರು 155ರ ವಾಯವ್ಯ ಮೂಲೆಯನ್ನು ಸೇರುವ ವರೆಗೆ ಅದೇ ಮುಖನಾಗಿ ಸರ್ವೆ ನಂಬರು 99ರ ಒಳಗೂ ಅನಂತರ ಸರ್ವೆ ನಂಬರು 155ರ ಪಶ್ಚಿಮ ಸರಹದ್ದಿನ ವೇಲೂ ಅನಂತರ ಸರ್ವೆ ನಂಬರು 91ರ ಒಳಗೆ ಒಂದೂವರೆ ಫರಲಾಂಗಿನಷ್ಟು ದೂರ ದಕ್ಷಿಣ ಮುಖನಾಗಿಯೂ, ಅನಂತರ ಸರ್ವೆ ನಂಬರು 96ರ ಒಳಗೆ ಎರಡು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ, ಅನಂತರ ಸರ್ವೆ ನಂಬರು 84ರ ವಾಯವ್ಯ ಮೂಲೆಯನ್ನು ಮುಟ್ಟುವ ವರೆಗೂ ಸರ್ವೆ ನಂಬರು 96ರ ಒಳಗೆ ನಾಲ್ಕುವರೆ ಫರಲಾಂಗಿನಷ್ಟು ದೂರ ದಕ್ಷಿಣ ಮುಖನಾಗಿಯೂ, ಅನಂತರ ಸರ್ವೆ ನಂಬರು 144ರ ಪಶ್ಚಿಮ ಸರಹದ್ದಿನವೇಲೆ ದಕ್ಷಿಣ ಮುಖನಾಗಿಯೂ, ಅನಂತರ ದಕ್ಷಿಣ ಕನ್ನಡ ಜಿಲ್ಲಾ ಸರಹದ್ದನ್ನು ಸೇರುವ ವರೆಗೆ ಸರ್ವೆ ನಂಬರು 87ರ ಒಳಗೆ ಆರುವರೆ ಫರಲಾಂಗಿನಷ್ಟು ದೂರ ನೈರುತ್ಯ ಮುಖನಾಗಿಯೂ ಸಹ ಹೋಗುತ್ತದೆ.

ದಕ್ಷಿಣಕ್ಕೆ :—ಮೇಲ್ಕಂಡ ಜಾಗದಿಂದ ಸದರಿ ರೇಖೆಯು ದಕ್ಷಿಣ ಕನ್ನಡ ಜಿಲ್ಲ ಸರಹದ್ದಿನಲ್ಲಿ ಊರುಬಗೆ ಮತ್ತು ಬೈರಾಪುರ ಗ್ರಾಮಗಳ ಎಲ್ಲೆಯು ಸೇರುವ ಜಾಗದ ವರೆಗೆ ಪಶ್ಚಿಮ ಮುಖನಾಗಿ ಹೋಗುತ್ತದೆ.

ಪಶ್ಚಿಮಕ್ಕೆ :—ಅಲ್ಲಿಂದ ಸದರಿ ರೇಖೆಯು ದಕ್ಷಿಣ ಕನ್ನಡ ಜಿಲ್ಲ ಸರಹದ್ದನ್ನನುಸರಿಸಿ ಹೊರಟು ಸ್ಥಳವನ್ನು ಸೇರುತ್ತದೆ.

2. ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ, ಮೈಸೂರು ಕೋ ಆಪರೇಟಿವ್ ಸೊಸೈಟೀಸ್ ಯಾ ಅನ್ಯೋನ್ಯ ಸಹಾಯ ಸಂಘಗಳ ರಿಜಿಸ್ಟ್ರಾರ್ ಮಿ|| ಎಂ. ಶಾಮರಾವ್, ಎಂ. ಎ., ಯವರನ್ನು, ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜವಿಾನಿನಲ್ಲಿ ಅಥವಾ ಅದರ ಮೇಲೆ ಅಥವಾ ಅಂಥಾ ಜಂಗಲಿ ಜವಿಾನಿನ ಉತ್ಪತ್ತಿಗೆ ಹಕ್ಕಿರುವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಿಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನು ಅವುಗಳ ಸ್ವಭಾವ ಮತ್ತು ಪರಿಮಾಣವನ್ನು ಕುರಿತು ವಿಚಾರಣೆ ಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ 2ನೆ ಅಧ್ಯಾಯದಲ್ಲಿ ವಿಧಿಸಿರುವಂತೆ ನಡೆಸುವುದಕ್ಕೆ, ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಾಗಿ ಮೊಕರರ್ರಾಡಲೂ, ಕಡೂರು ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಿಗೆ ಗವರ್ನಮೆಂಟ್ ತರಫ್ ಸಹಾಯ ಮಾಡುವುದಕ್ಕೆ ಹಾಜರಾಗುವುದಕ್ಕಾಗಿ ಮೊಕರರ್ರಾಡಲೂ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರವನ್ನನುಸರಿಸಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಕಡೂರು ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರನ್ನು ಫಾರೆಸ್ಟ್ ಸೆಟ್ಲ್‌ಮೆಂಟು ಆಫಿಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನು ಅನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ತನಿಖೆ ಮಾಡುವ ರೆವಿನ್ಯೂ ಆಫಿಸರಾಗಿ ಮೊಕರರ್ರಾಡುವುದಕ್ಕೂ ಸಹ ಅಪ್ಪಣೆಯನ್ನು ದಯಪಾಲಿಸಿರುತ್ತಾರೆ.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇನ್ಸ್ಟ್ರಾರ್ನಾಮೆ.

ತಾರೀಖು 6ನೆ ಮಾರ್ಚಿ 1907.

ನಂ. 205—1670, ಮೈಸೂರು ಡಿವಿಜ್‌ನಿಗೆ ಸೇರಿದ ಅಸಿಸ್ಟೆಂಟು ಇಂಜಿನಿಯರ್ ಮಿ|| ಬಿ. ಸಿ. ಶ್ರೀನಿವಾಸ ಅಯ್ಯಂಗಾರ್, ಬಿ. ಎ., ಬಿ. ಸಿ. ಇ., ಯವರಿಗೆ 1907ನೆ ಜನವರಿ 23ನೆ ತಾರೀಖಿನಿಂದ ಒಂದು ತಿಂಗಳು 6 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಹುಕುಂ ಬಮೋಜೀಬ್,
ಬಿ. ಎನ್. ಕೃಷ್ಣಾಚಾರ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ, ಮೈಸೂರು ಗವರ್ನಮೆಂಟ್, ಅಂಡರ್ ಸೆಕ್ರೆಟರಿ.